## ನಗರಸಭಾ ಕಾರ್ಯಾಲಯ, ಮಂಡ್ಯ.

**ಸಂಖ್ಯೆ:ನಸಮಂ/ಸಭೆ/1/2008–09.** **ದಿನಾಂಕ:21–5–2008.**

ದಿನಾಂಕ:21–5–2008ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಅಧಿವೇಶನದ (ದಿನಾಂಕ: 9–4–2008ರಂದು ಕರೆಯಲಾಗಿದ್ದು ಕಾರಣಾಂತರದಿಂದ ಮುಂದೂಡಿದ ಸಭೆ) ಸಭೆ ನಡವಳಿಕೆಗಳು.

**ಹಾಜರಿ:32** **ಗೈರುಹಾಜರಿ:02** **ಖಾಲಿ:1** **ಒಟ್ಟು:35**

ಸಭೆಯಲ್ಲಿ ಹಾಜರಿದ್ದ ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳನ್ನು ಮತ್ತು ಟಿ.ವಿ. ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮದ ಪತ್ರ ಕರ್ತರು ಮತ್ತು ವರದಿಗಾರರನ್ನು ನಗರಸಭೆ ಪೌರಾಯುಕ್ತರು ಸಭೆಗೆ ಸ್ವಾಗತಿಸಿದರು.

ನಂತರ ಅಧ್ಯಕ್ಷರು ಮಾತನಾಡಿ ಮೃತರಾದ ನಗರಸಭಾ ಸದಸ್ಯರಾದ ದಿ॥ ರವಿರವರು ಮತ್ತು ಮಾಜಿ ನಗರ ಸಭಾ ಸದಸ್ಯರುಗಳಾದ ದಿ॥ ಹೆಚ್.ಎಂ.ನಿಂಗಣ್ಣರವರು ಮತ್ತು ದಿ॥ ಸಿ.ಚೌಡಯ್ಯರವರು, ಹಾಗೂ ಮಾಜಿ ಶಾಸಕರಾದ ದಿ॥ ದೊಡ್ಡಬೋರೇಗೌಡರವರು ಇವರುಗಳ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಎಲ್ಲರೂ ಎದ್ದು ನಿಂತು ಸಭೆಯಲ್ಲಿ ಎರಡು ನಿಮಿಷಗಳು ಮೌನ ಆಚರಿಸಲು ತಿಳಿಸಿದ್ದರ ಮೇರೆಗೆ ಎಲ್ಲರೂ ಎದ್ದು ನಿಂತು ಎರಡು ನಿಮಿಷಗಳು ಮೌನ ಆಚರಿಸಿ ಸಂತಾಪ ಸೂಚಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ನಗರಸಭಾ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮಾತನಾಡಿ ದಿನಾಂಕ:17–5–2008ರ ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ " ಆಯುಕ್ತರು ಮತ್ತು ಸಿಬ್ಬಂದಿ ಮೇಲೆ ದಾಳಿ" ಎಂಬ ಶೀರ್ಷಿಕೆಯಲ್ಲಿ ನಗರಸಭೆಗೆ 50.00ಲಕ್ಷ , 60.00ಲಕ್ಷ ನಷ್ಟ ಉಂಟಾಗಿದೆ, ಲೋಕಾಯುಕ್ತರು ಕಡತಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಈ ವಿಷಯದ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಅಧ್ಯಕ್ಷರು ಈ ಬಗ್ಗೆ ಮಾತನಾಡುತ್ತಾ ಇದು ದಾಳಿ ಅಲ್ಲ. ಶ್ರೀ.ವೆಂಕಟೇಶಯ್ಯರವರು ದೂರು ನೀಡಿದ್ದರ ಮೇರೆಗೆ ತನಿಖೆಗಾಗಿ ಲೋಕಾಯುಕ್ತ ಅಧಿಕಾರಿಗಳು ಈ ಕಛೇರಿಗೆ ಭೇಟಿ ನೀಡಿದ್ದರು. ವೈಟ್ ಮೆಟಲ್ ಅಲಾಯಿಡ್ ಲೈಟ್, ನಿರ್ಮಲ ನಗರ ಯೋಜನೆಯಡಿ ಮನೆ ಮನೆಯಿಂದ ಕಸ ಸಂಗ್ರಹಿಸುವ ಸಂಬಂಧ ನಿಗಧಿಪಡಿಸಿರುವ ವಸೂಲಿ ಕ್ರಮದ ಬಗ್ಗೆ ದೂರು ನೀಡಿದ್ದಾರೆ. ಲೋಕಾಯುಕ್ತ ಅಧಿಕಾರಿಗಳಿಗೆ ಈ ಕಛೇರಿಯಲ್ಲಿಯೇ ಕಡತಗಳನ್ನು ಪರಿಶೀಲನೆಗಾಗಿ ನೀಡಿ ತನಿಖೆ ನಡೆಸಿ ಹೋಗಿರುತ್ತಾರೆಯೇ ಹೊರತು ಯಾವುದೇ ಕಡತಗಳನ್ನು ಲೋಕಾಯುಕ್ತ ಅಧಿಕಾರಿಗಳು ಕಛೇರಿಯಿಂದ ಹೊರಗೆ ತೆಗೆದುಕೊಂಡು ಹೋಗಿರುವುದಿಲ್ಲ. ನನ್ನ ಅಧಿಕಾರದ ಅವಧಿಯಲ್ಲಿ ಕಛೇರಿಗೆ ಮೇಲಧಿಕಾರಿಗಳು ಬಂದು ತನಿಖೆ ಕ್ರಮ ಕೈಗೊಂಡಿರುತ್ತಾರೆ ಇದು ಉತ್ತಮವಾದ ಕ್ರಮ. ನಗರಸಭೆಯಲ್ಲಿ ಯಾವುದೇ ಅವ್ಯವಹಾರಗಳು ನಡೆಯದಂತೆ ಆಡಳಿತ ನಡೆಸಲು ಅನುಕೂಲವಾಗಿರುತ್ತದೆ. ಯಾವುದೇ ತಪ್ಪು ಆಗಿರುವುದು ಕಂಡುಬಂದಿಲ್ಲ ಎಂದು ಸಭೆಗೆ ತಿಳಿಸಿದರು.

ನಂತರ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಲೋಕಾಯುಕ್ತರು ಯಾವುದೇ ಕಡತಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಮತ್ತು ತನಿಖೆ ಮಾಡಿದಾಗ ಯಾವುದೇ ತಪ್ಪುಗಳು ಕಂಡುಬಂದಿರುವುದಿಲ್ಲ ಎಂದ ಮೇಲೆ ಈ ರೀತಿ ನಗರಸಭೆ ವಿರುದ್ಧ ಸುಳ್ಳು ಆರೋಪ ಮಾಡಿರುವುದು ನಗರಸಭೆಗೆ ಅವಮಾನ ಆದಂತಾಗಿದೆ. ಆದ್ದರಿಂದ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಮೊಖದ್ದಮೆ ಹೂಡಲು ಕ್ರಮ ವಹಿಸುವಂತೆ ಸೂಚಿಸಿದರು.

–2–

ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಅರುಣಕುಮಾರ್‌ರವರು ಮತ್ತು ಶ್ರೀ.ಹೆಚ್.ಸಿ.ಬೋರೇಗೌಡರವರು ಮಾತನಾಡಿ ನಾಯಿಗಳ ಕಾಟ, ಹಂದಿಗಳ ಕಾಟ ಮತ್ತು ನೀರಿಗಾಗಿ ಪರದಾಟ. ಆದರೆ ನಗರಸಭೆ ಯಾವುದೇ ರೀತಿಯ ಸೂಕ್ತ ವ್ಯವಸ್ಥೆ ಮಾಡಿರುವುದಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಶೀಘ್ರವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಶ್ರೀ.ಚಿಕ್ಕಣ್ಣರವರು ಮಾತನಾಡಿ ನಾನು ಸಲ್ಲಿಸಿರುವ ಅರ್ಜಿ ಸಂಭಂದ ತಿಂಗಳಾದರೂ ಕ್ರಮ ವಹಿಸಿರುವುದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಶ್ರೀ.ಕೆ.ಎಲ್.ನಾಗೇಂದ್ರರವರು ನಗರಸಭಾ ಸದಸ್ಯರುಗಳಿಗೆ ತರಬೇತಿ ಕಾರ್ಯಕ್ರಮದ ವ್ಯವಸ್ಥೆ ಮಾಡುವಂತೆಯೂ ಮತ್ತು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಕಾರ್ಯ ವೈಖರಿ ಬಗ್ಗೆ ಇರುವ ಮಾರ್ಗಸೂಚಿಗಳ ಪ್ರತಿಯನ್ನು ಎಲ್ಲಾ ಸದಸ್ಯರುಗಳಿಗೂ ಮಾಹಿತಿಗಾಗಿ ಒದಗಿಸುವಂತೆ ಸೂಚಿಸಿದರು.

ಅಧ್ಯಕ್ಷರು ಮಾತನಾಡಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದ್ದರಿಂದ ಮತ್ತು ಅಧಿಕಾರಿಗಳು ಸಿಬ್ಬಂದಿ ವರ್ಗದವರು ಚುನಾವಣಾ ಕಾರ್ಯದಲ್ಲಿ ತೊಡಗಿದ್ದರಿಂದ. ಮೇಲ್ಕಂಡಂತೆ ಸದಸ್ಯರುಗಳು ತಿಳಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬವಾಗಿರುತ್ತೆ. ಚುನಾವಣಾ ಮತ ಎಣಿಕೆ ಪ್ರಕ್ರಿಯೆ ಮುಗಿದ ನಂತರ 2008ನೇ ಜೂನ್ 10 ರ ನಂತರ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ಪರಿಶೀಲಿಸಿ ಸಾರ್ವಜನಿಕರಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಒದಗಿಸಿ ನಗರಸಭೆ ಹಿತ ಕಾಪಾಡಲು ಹಾಗೂ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಅನಿಮಲ್ ಬರ್ತ್ ಕಂಟ್ರೋಲ್ ಕಾರ್ಯಕ್ರಮ ನಿರ್ವಹಿಸಲು ಪಶು ಸಂಗೋಪನಾ ಇಲಾಖೆ ಅಧಿಕಾರಿಗಳೊಡನೆ ಪತ್ರ ವ್ಯವಹಾರ ಮಾಡಲಾಗಿದೆ ಈ ಬಗ್ಗೆಯೂ ಕ್ರಮ ಕೈಗೊಳ್ಳಲಾಗುವುದು ಅಲ್ಲದೇ ಹಂದಿಗಳ ಹಾವಳಿ ನಿಯಂತ್ರಿಸುವ ಸಲುವಾಗಿ ಹಂದಿ ಮಾಲೀಕರಿಗೆ ನೋಟೀಸ್ ನೀಡಿ ನಗರ ಪ್ರದೇಶದಿಂದ ದೂರ ಪ್ರದೇಶದಲ್ಲಿ ಹಂದಿಗಳನ್ನು ಸಾಕುವಂತೆ ತಿಳಿಸಲಾಗಿದೆ.

ಶ್ರೀ.ಎಂ.ಎಲ್.ಮಂಜುನಾಥ್ ರವರು ಮಾತನಾಡಿ 12ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ 1 ಕೋಟಿ 8 ಲಕ್ಷ ರೂಪಾಯಿಗಳಿಗೆ ಆಡಳಿತಾಧಿಕಾರಿಗಳ ಅವಧಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆದಿರುತ್ತೀರಿ. ಮಾನ್ಯ ಜಿಲ್ಲಾಧಿಕಾರಿಯವರ ಮಂಜೂರಾತಿ ದೊರೆತಿದೆಯೇ? ಈ ಯೋಜನಯಡಿಯಲ್ಲಿ ಬಿಡುಗಡೆಯಾಗಿರುವ ಹಣವನ್ನು 35 ವಾರ್ಡ್‌ಗಳಿಗೂ ಸಮನಾಗಿ ಹಂಚಿಕೆ ಮಾಡಿ ಕಾಮಗಾರಿಗಳನ್ನು ಮಾಡಿಸಿ. ಈಗ ಹೊರಡಿಸಿರುವ ಟೆಂಡರ್ ಪ್ರಕಟಣೆಯನ್ನು ಹಿಂದಕ್ಕೆ ಪಡೆಯಿರಿ ಎಂದು ತಿಳಿಸಿದರು

ಪೌರಾಯುಕ್ತರು ಸರ್ಕಾರದ ಆದೇಶದ ರೀತ್ಯಾ 12ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ 1ಕೋಟಿ 8ಲಕ್ಷ ರೂಪಾಯಿಗಳಿಗೆ ಆಡಳಿತಾಧಿಕಾರಿಗಳ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಕ್ರಮ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.

ಶ್ರೀ.ಕೆ.ಎಲ್.ನಾಗೇಂದ್ರರವರು ಮತ್ತು ಶ್ರೀ.ನಾಗರಾಜುರವರುಗಳು ಈ ಕಾಮಗಾರಿಗಳಿಗೆ ಟೆಂಡರ್ ಕರೆದಾಗ ಕೌನ್ಸಿಲ್ ಅಸ್ತಿತ್ವದಲ್ಲಿತ್ತೇ? ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದಿದ್ದರೆ ಆಡಳಿತಾಧಿಕಾರಿಗಳ ಅವಧಿಯಲ್ಲಿ ಕಾಮಗಾರಿಗಳ ಮಂಜೂರಾತಿ ಪಡೆದು ಕ್ರಮ ಕೈಗೊಂಡಿದ್ದಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಂತರ ಅಧ್ಯಕ್ಷರು ಮಾತನಾಡಿ ಮುಂದೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಮತ್ತು ನಗರಸಭೆಯಿಂದ ಆಧ್ಯತೆ ಮೇರೆಗೆ ಆಗಬೇಕಾದ ಕಾಮಗಾರಿಗಳಿಗೆ ಪ್ರಾಮುಖ್ಯತೆ ನೀಡಿ ಮಾಡಿಸಿಕೊಡುಲಾಗುವುದು. ಆದ್ದರಿಂದ ಆಯವ್ಯಯ ಮಂಡನೆಗೆ ಅವಕಾಶ ಮಾಡಿಕೊಡುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು 2008–09ನೇ ಸಾಲಿನ ಅಂದಾಜು ಆಯ–ವ್ಯಯದ ಪಕ್ಷಿ ನೋಟವನ್ನು ಸಭೆಗೆ ಓದಿ ಆಯವ್ಯಯವನ್ನು ಅನುಮೋದನಾಗಾಗಿ ಮಂಡಿಸಿದರು.

**ವಿಷಯು ಸಂಖ್ಯೆ:1:–** ಮಂಡ್ಯ ನಗರಸಭೆಯ 2008–09ನೇ ಸಾಲಿನ ಅಂದಾಜು ಆಯವ್ಯಯ ಪತ್ರವನ್ನು ಪರಿಶೀಲಿಸಿ, ಒಪ್ಪಿ ಅನುಮೋದಿಸುವ ವಿಚಾರ. ಆಯವ್ಯಯ ಪಟ್ಟಿಯನ್ನು ಲಗತ್ತಿಸಿದೆ.
**ತೀರ್ಮಾನ ಸಂಖ್ಯೆ:1:–** 2008–09ನೇ ಸಾಲಿನ ನಗರಸಭೆಯ ಅಂದಾಜು ಆಯವ್ಯಯ ಪತ್ತವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು

**ನಗರಸಭೆಂಯ 2008–09ನೇ ಸಾಲಿನ ನಗರಸಭೆಂಯ ಅಂದಾಜು ಆಯವ್ಯಯ ಘೋಷ್ವಾರೆ**

| | | |
|---|---|---|
| ಎ | ಆರಂಭ ಶಿಲ್ಕು | ರೂ.4,30,48,198–00 |
| **ಬಿ** | **ರಾಜಸ್ವ ಖಾತೆ :** | |
| | 1) ರಾಜಸ್ವ ಸ್ವೀಕೃತಿ | ರೂ.19,46,94,429–00 |
| | 2) ರಾಜಸ್ವ ಪಾವತಿಗಳು | ರೂ.10,61,49,764–00 |
| | **ರಾಜಸ್ವ ಖಾತೆಯಲ್ಲಿನ ಹೆಚ್ಚುವರಿ ಬಾಬ್ತು** | **ರೂ. 8,85,44,665–00** |
| ಸಿ | **ಬಂಡವಾಳ ಖಾತೆ:–** | |
| | 1) ಬಂಡವಾಳ ಸ್ವೀಕೃತಿಗಳು | ರೂ. 2,37,00,000–00 |
| | 2) ಬಂಡವಾಳ ಪಾವತಿಗಳು | ರೂ.17,42,00,000–00 |
| | **ಬಂಡವಾಳ ಖಾತೆಯಲ್ಲಿ ಕೊರತೆ (–)** | **ರೂ.15,05,00,000–00** |
| ಡಿ | **ಅಸಾಧಾರಣ ಖಾತೆ :–** | |
| | 1) ಅಸಾಧಾರಣ ಸ್ವೀಕೃತಿಗಳು | ರೂ. 8,72,83,547–00 |
| | 2) ಅಸಾಧಾರಣ ಪಾವತಿಗಳು | ರೂ. 6,12,75,712–00 |
| | **ಅಸಾಧಾರಣ ಖಾತೆಯು ಹೆಚ್ಚುವರಿ** | **ರೂ. 2,51,07,835–00** |
| ಇ | ಒಟ್ಟು ಹೆಚ್ಚುವರಿ/ಕೊರತೆ (ಬಿ+ಸಿ+ಡಿ)(–) | **ರೂ. 3,68,47,500–00** |
| | **ಅಂತಿಮ ಶಿಲ್ಕು** (ಎ+ಇ) | **ರೂ. 62,00,698–00** |

**ವಿಷಯು ಸಂಖ್ಯೆ:2:–** 12ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಹಣದಲ್ಲಿ ಕಾಮಗಾರಿ ನಿರ್ವಹಿಸಲು ಟೆಂಡರ್ ಕರೆಯಲಾಗಿದ್ದು, ಈ ಸಂಬಂಧ ಬಂದಿರುವ ಟೆಂಡರ್ ದರಗಳನ್ನು ಪರಿಶೀಲಿಸಿ ಅತ್ಯಂತ ಕಡಿಮೆ ದರ ನಮೂದಿಸಿರುವ ಟೆಂಡರನ್ನು ಒಪ್ಪಿ ಅನುಮೋದಿಸುವ ವಿಚಾರ. ಟೆಂಡರ್ ದರ ತುಲನಾತ್ಮಕ ಪಟ್ಟಿ ಲಗತ್ತಿಸಿದೆ.

ನಗರಸಭೆ, ಮಂಡ್ಯ.

2007–08ನೇ ಸಾಲಿನ 12ನೇ ಹಣಕಾಸು ಯೋಜನೆಯಡಿಯಲ್ಲಿ ಕರೆದಿರುವ ಟೆಂಡರ್ ಕಾಮಗಾರಿಗಳ ತುಲನಾತ್ಮಕ ಪಟ್ಟಿ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ.ಲಕ್ಷ ಗಳಲ್ಲಿ | ಗುತ್ತಿಗೆದಾರರ ಹೆಸರು | ನಮೂದಿಸಿರುವ ಶೇಕಡ ದರ 2007–08 ಎಸ್.ಆರ್.ಮೇಲೆ | | ದಿನಾಂಕ:2–4–08ರಲ್ಲಿ ಮಾನ್ಯ ನಗರಸಬಾ ಅಧ್ಯಕ್ಷರು ಸಂಧಾನದ ನಂತರ ನಿಗಧಿಪಡಿಸಿದ ದರದಂತೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | **ಪ್ಯಾಕೇಜ್–1** | | | |
| 1 | ವಾರ್ಡ್ ನಂ.1, ನಾಲಬಂದವಾಡಿ ರಸ್ತೆ ಅಭಿವೃದ್ಧಿ ಮತ್ತು ವಾರ್ಡ್ ನಂಬರ್;2, ಕಾಂಕ್ರೀಟ್ ರಸ್ತೆ ನಿರ್ಮಾಣ (ಎಂ.ಜಿ.ರಾಜು ರವರ ಮನೆ ರಸ್ತೆ) | 3.00 | 1)ಎಂ.ಎಸ್.ಚಿದಂಬರ | 19.25% | ಎಲ್ 1 | |
| 2 | ವಾರ್ಡ್ ನಂ.3, ಮುಸ್ಲಿಂ ಬ್ಲಾಕ್ ನಲ್ಲಿ ರಸ್ತೆ ಅಭಿವೃದ್ಧಿ ಮತ್ತು ವಾರ್ಡ್ ನಂ.4ರಲ್ಲಿ ಶಂಕರಮಠ ದಲ್ಲಿ ರಸ್ತೆ ಅಭಿವೃದ್ಧಿ | 3.00 | | | | |
| 3 | ವಾರ್ಡ್ ನಂ.7ರಲ್ಲಿ ವಿ.ವಿ. ನಗರ 24ನೇ ಕ್ರಾಸ್ ರಸ್ತೆ ಅಭಿವೃದ್ಧಿ. | 3.00 | 2) ಎಂ.ಆರ್.ಸತೀಶ್ | 24.48% | ಎಲ್ 2 | |
| 4 | ವಾರ್ಡ್ ನಂ.8ರ ಕಿರಗಂದೂರು ರಸ್ತೆ ಅಭಿವೃದ್ಧಿ (ಕಾಳೇಗೌಡ ಸ್ಕೂಲ್ ರಸ್ತೆಯಿಂದ ಕಿರಗಂದೂರು ಕಡೆ ರಸ್ತೆ) | 4.00 | | | | |
| 5 | ವಾರ್ಡ್ ನಂ.7ರಲ್ಲಿ ಅಡ್ಡ ರಸ್ತೆ ಗಳಿಗೆ ಡೆಕ್ ಸ್ಲ್ಯಾಬ್ ನಿರ್ಮಾಣ. | 2.00 | | | | |
| | **ಒಟ್ಟು** | **15.00** | | | | |
| | | | **ಪ್ಯಾಕೇಜ್ – 2** | | | |
| 1 | ವಾರ್ಡ್ ನಂ.10, ಸುಭಾಷ್ ನಗರ 2ನೇ ಕ್ರಾಸ್ ರಸ್ತೆ ಅಭಿವೃದ್ಧಿ | 4.00 | 1) ಹೆಚ್.ಟಿ.ಗಣೇಶ | 18.53% | ಎಲ್1 | |
| 2 | ವಾರ್ಡ್ ನಂ.11, ವಿದ್ಯಾ ನಗರ 2ನೇ ಕ್ರಾಸ್ ಆರ್. ಪಿ.ರಸ್ತೆಯಿಂದ ಪಾರ್ಕ್ ವರೆಗೆ ರಸ್ತೆ ಅಭಿವೃದ್ಧಿ. | 2.50 | 2) ಎಸ್.ಎಸ್.ಚೇತನ್ | 27.6% | ಎಲ್2 | |
| | **ಒಟ್ಟು** | **6.50** | | | | |
| | | | **ಪ್ಯಾಕೇಜ್–3** | | | |
| 1 | ವಾರ್ಡ್ ನಂ.13, ಶಂಕರನಗರ ವಿನ್ಸೆಂಟ್ ಮನೆ ರಸ್ತೆ ಅಭಿವೃದ್ಧಿ | 2.00 | 1) ಸಿದ್ದರಾಮಯ್ಯ | 19.37% | ಎಲ್1 | |
| 2 | ವಾರ್ಡ್ ನಂ.14 ಚಾಮುಂಡೇಶ್ವರಿ ನಗರ ಅಭಿನವ ಭಾರತಿ ಕಾಲೇಜು ಮುಂಭಾಗದ ರಸ್ತೆ ಅಭಿವೃದ್ಧಿ | 4.00 | | | | |
| 3 | ವಾರ್ಡ್ ನಂ.14 ಕೆ.ಇ.ಬಿ. ಕಾಲೋನಿ 10ನೇ ಕ್ರಾಸ್‌ನಿಂದ ಕಾಲುವೆವರೆಗೆ ರಸ್ತೆ ಅಭಿವೃದ್ಧಿ | 3.00 | | | | |

–5–

| | | | | | | |
|---|---|---|---|---|---|---|
| 4 | ವಾರ್ಡ್ ನಂ.14ರ ಕೆ.ಇ.ಬಿ. ಕಾಲೋನಿಯಲ್ಲಿ ರಸ್ತೆಗಳಿಗೆ ಡೆಕ್ ಸ್ಲ್ಯಾಬ್ ನಿರ್ಮಾಣ. | 0.84 | 2) ಹೆಚ್.ಎಸ್.ಮಂಜು | 23.86% | ಎಲ್2 | |
| 5 | ವಾರ್ಡ್ ನಂ.14, ಚಾಮುಂಡೇಶ್ವರಿ ನಗರದಲ್ಲಿ ಡೆಕ್ ಸ್ಲ್ಯಾಬ್ ನಿರ್ಮಾಣ. | 1.00 | | | | |
| | **ಒಟ್ಟು** | 10.84 | | | | |
| | | | **ಪ್ಯಾಕೇಜ್–4** | | | |
| 1 | ವಾರ್ಡ್ ನಂ.15, ಕುವೆಂಪುನಗರ 3ನೇ ಕ್ರಾಸ್ ರಸ್ತೆ ಅಭಿವೃದ್ಧಿ | 3.00 | 1) ಎಲ್.ಆರ್.ಮದನ್ | 15.06 | ಎಲ್1 | |
| 2 | ವಾರ್ಡ್ ನಂ.16, ಕಾವೇರಿ ನಗರ ಕ್ರಾಸ್ ರಸ್ತೆ ಅಭಿವೃದ್ಧಿ (ವಿವೇಕಾ ನಂದ ರಸ್ತೆ ಅಭಿವೃದ್ಧಿ) | 2.50 | | | | |
| 3 | ವಾರ್ಡ್ ನಂ.15, ಕುವೆಂಪುನಗರ ಕ್ರಾಸ್ ರಸ್ತೆಗಳ ಅಭಿವೃದ್ಧಿ | 3.00 | 2) ಎಂ.ಆರ್.ಸತೀಶ್ | 17.37% | ಎಲ್2 | |
| 4 | ವಾರ್ಡ್ ನಂ.13ರಲ್ಲಿ ಕುವೆಂಪು ನಗರ ರಸ್ತೆಗಳಲ್ಲಿ ಡೆಕ್ ಸ್ಲ್ಯಾಬ್ ನಿರ್ಮಾಣ. | 0.75 | | | | |
| | **ಒಟ್ಟು ಮೊತ್ತ** | 9.25 | | | | |
| | | | **ಪ್ಯಾಕೇಜ್–5** | | | |
| 1 | ವಾರ್ಡ್ ನಂ.17ರ ಕೆ.ಹೆಚ್.ಬಿ. ಕಾಲೋನಿ ರಸ್ತೆ ಅಭಿವೃದ್ಧಿ | 3.00 | 1) ಹೆಚ್.ಟಿ.ಬಾಲರಾಜು | 13.88% | ಎಲ್1 | |
| 2 | ವಾರ್ಡ್ ನಂ.18ರಲ್ಲಿ ರಸ್ತೆ ಅಭಿವೃದ್ಧಿ. | 3.00 | | | | |
| 3 | ವಾರ್ಡ್ ನಂ.19 ನೆಹರುನಗರ ಅಡ್ಡ ರಸ್ತೆ ಅಭಿವೃದ್ಧಿ | 3.00 | 2) ಶಂಕರ | 19.46% | ಎಲ್2 | |
| 4 | ವಾರ್ಡ್ ನಂ.19ರಲ್ಲಿ ಗಾಂಧಿನಗರ ರಸ್ತೆಗಳಿಗೆ ಡೆಕ್ ಸ್ಲ್ಯಾಬ್ ನಿರ್ಮಾಣ | 1.00 | | | | |
| | **ಒಟ್ಟು ಮೊತ್ತ** | 10.00 | | | | |
| | | | **ಪ್ಯಾಕೇಜ್–6** | | | |
| 1 | ವಾರ್ಡ್ ನಂ.20 ಡ್ಯಾಫೋಡಿಲ್ಸ್ ಸ್ಕೂಲ್ ಪಕ್ಕದ ರಸ್ತೆ ಅಭಿವೃದ್ಧಿ | 2.00 | 1) ಎಂ.ಬಿ.ರಾಜಪ್ಪ | 18.16% | ಎಲ್1 | |
| 2 | ವಾರ್ಡ್ ನಂ.21, ಹಾಲಹಳ್ಳಿ ಹರಿಜನ ಕಾಲೋನಿ ರಸ್ತೆ ಅಭಿವೃದ್ಧಿ | 3.00 | | | | |
| 3 | ವಾರ್ಡ್ ನಂ.22, ಹಾಲಹಳ್ಳಿ ಕೆರೆ ರಸ್ತೆ ಅಭಿವೃದ್ಧಿ | 3.50 | 2) ವಿ.ಪ್ರಕಾಶ್ | 21.63% | ಎಲ್2 | |
| 4 | ವಾರ್ಡ್ ನಂ.21, ಹಾಲಹಳ್ಳಿಯಲ್ಲಿ ಅಡ್ಡ ರಸ್ತೆಗಳಿಗೆ ಡೆಕ್ ಸ್ಲ್ಯಾಬ್ ನಿರ್ಮಾಣ. | 1.25 | | | | |
| | **ಒಟ್ಟು ಮೊತ್ತ** | 10.25 | | | | |

| | | | | | | |
|---|---|---|---|---|---|---|
| **ಪ್ಯಾಕೇಜ್ –7** | | | | | | |
| 1 | ವಾರ್ಡ್ ನಂ.25 ಉದಯಗಿರಿ 6ನೇ ಕ್ರಾಸ್ ರಸ್ತೆ ಅಭಿವೃದ್ಧಿ | 3.50 | 1) ಎನ್.ವೆಂಕಟೇಶ್ | 16.47% | ಎಲ್1 | |
| 2 | ವಾರ್ಡ್ ನಂ.26 ರವೀಂದ್ರ ರೈಸ್ ಮಿಲ್ ಮುಂಭಾಗದ ಸರಸ್ತೆ ಅಭಿವೃದ್ಧಿ. | 3.50 | | | | |
| 3 | ವಾರ್ಡ್ ನಂ.27, ತಾವರೆಗೆರೆ 4ನೇ ಕ್ರಾಸ್ ಸರಸ್ತೆ ಅಭಿವೃದ್ಧಿ | 3.00 | 2) ಹೆಚ್.ಎಸ್.ಮಂಜು | 25.33% | ಎಲ್2 | |
| 4 | ವಾರ್ಡ್ ನಂ.25 ಅಡ್ಡ ರಸ್ತೆಗಳಿಗೆ ಡೆಕ್ ಸ್ಲ್ಯಾಬ್ ನಿರ್ಮಾಣ | 0.75 | | | | |
| | **ಒಟ್ಟು ಮೊತ್ತ** | 10.75 | | | | |
| **ಪ್ಯಾಕೇಜ್ – 8** | | | | | | |
| 1 | ವಾರ್ಡ್ ನಂ.28, ಗುತ್ತಲು ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಕಲ್ವರ್ಟ್ ನಿರ್ಮಾಣ | 3.00 | 1) ಹೆಚ್.ಎಸ್.ರಮೇಶ್ | 22.75% | ಎಲ್1 | |
| 2 | ವಾರ್ಡ್ ನಂ.30 ರಥದ ಬೀದಿ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 4.00 | 2) ಹೆಚ್.ಎಸ್.ಮಂಜು | 24.73% | ಎಲ್2 | |
| | **ಒಟ್ಟು ಮೊತ್ತ** | 7.00 | | | | |
| **ಪ್ಯಾಕೇಜ್ – 9** | | | | | | |
| 1 | ವಾರ್ಡ್ ನಂ.30 ಪ್ರೈಮರಿ ಸ್ಕೂಲ್ ಪಕ್ಕದ ರಸ್ತೆ ಹಾಗೂ ಓಣಿ ರಸ್ತೆ ಅಭಿವೃದ್ಧಿ | 7.50 | 1) ಹೆಚ್.ಎಸ್.ಮಂಜು | 20.24% | ಎಲ್1 | |
| 2 | ವಾರ್ಡ್ ನಂ.30ರಲ್ಲಿ ಡಎಕ್ ಸ್ಲ್ಯಾಬ್ ನಿರ್ಮಾಣ | 0.42 | 2) ಎನ್.ವೆಂಕಟೇಶ್ | 23.00 | ಎಲ್2 | |
| | **ಒಟ್ಟು ಮೊತ್ತ** | 7.92 | | | | |
| ಪ್ಯಾಕೇಜ್ – 10 | | | | | | |
| 1 | ವಾರ್ಡ್ ನಂ.32ರಲ್ಲಿ ಹರಿರಾಂ ರಸ್ತೆ ಅಭಿವೃದ್ಧಿ | 5.00 | 1) ತಿಮ್ಮೇಗೌಡ | 16.94% | ಎಲ್1 | |
| 2 | ವಾರ್ಡ್ ನಂ.34ರಲ್ಲಿ ಮಾರುತಿ ಬಡಾವಣೆ 7 ಮತ್ತು 8ನೇ ಕ್ರಾಸ್ ರಸ್ತೆ ಅಭಿವೃದ್ಧಿ | 5.00 | | 20.54 | ಎಲ್2 | |
| | **ಒಟ್ಟು ಮೊತ್ತ** | 10.00 | | | | |
| | **ಪ್ಯಾಕೇಜ್ – 11** | | | | | |
| 1 | ದವಾರ್ಡ್ ನಂ.35 ಷುಗರ್ ಟೌನ್ ಪೋಸ್ಟ್ ಆಫೀಸ್ ರಸ್ತೆ ಯಲ್ಲಿ ಅಭಿವೃದ್ಧಿಪಡಿಸುವುದು | 10.00 | 1) ವಿ.ಡಿ.ನಾಗೇಶ್ | 17.31% | ಎಲ್1 | |
| | | | 2) ಎನ್.ವೆಂಕಟೇಶ್ | 20.0% | ಎಲ್2 | |
| | **ಒಟ್ಟು ಮೊತ್ತ** | 10.00 | | | | |

| | | |
|---|---|---|
| ಸಹಿ: | ಸಹಿ: | ಸಹಿ: |
| ಸಹಾಯಕ ಕಾರ್ಯಪಾಲಕ ಅಭಿಯಂತರರು, | ಪೌರಾಯುಕ್ತರು, | ಅಧ್ಯಕ್ಷರು, |
| ನಗರಸಭೆ, ಮಂಡ್ಯ. | ನಗರಸಭೆ, ಮಂಡ್ಯ. | ನಗರಸಭೆ, ಮಂಡ್ಯ. |

**ತೀರ್ಮಾನ ಸಂಖ್ಯೆ:2:–** ಶ್ರೀ.ಎಂ.ಎಲ್.ಮಂಜುನಾಥ್‌ರವರು. ಶ್ರೀ.ಖುರುಂ ಪಾಷರವರು, ಶ್ರೀಮತಿ:ಆಯಿಷಾ ತಬಸೂಂ ರವರು, ಶ್ರೀ.ಟಿ.ಎಲ್.ಶಂಕರೇಗೌಡರವರು,, ಶ್ರೀ.ಚಲುವರಾಜುರವರು ಶ್ರೀಮತಿ:ಶಹಜಾನ್‌ರವರ, ಶ್ರೀ.ಅಫ್ರೋಜ್ ಖಾನ್‌ರವರು ಇವರುಗಳು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ 12ನೇ ಹಣಕಾಸು ಯೋಜನೆ ಅನುದಾನದ ಹಣದಿಂದ ಕಾಮಗಾರಿಗಳನ್ನು ನಿರ್ವಹಿಸಲು ಕರೆಯಲಾಗಿರುವ ಟೆಂಡರ್‌ನ್ನು ಹಿಂದಕ್ಕೆ ಪಡೆದು ರದ್ದುಪಡಿಸಿ ಸದರಿ ಅನುದಾನದ ಹಣವನ್ನು ಎಲ್ಲಾ ವಾರ್ಡ್‌ಗಳಿಗೂ ಸಮನಾಗಿ ಹಂಚಿಕೆ ಮಾಡಿ ಕಾಮಗಾರಿ ನಿರ್ವಹಿಸುವಂತೆ ಒತ್ತಾಯಪಡಿಸಿದರು. ಇವರುಗಳನ್ನು ಹೊರತುಪಡಿಸಿ, ಶ್ರೀ.ಕೆ.ಎಲ್.ನಾಗೇಂದ್ರರವರು ಸದರಿ ಕಾಮಗಾರಿಗಳು ನಗರಸಭೆ ಆಡಳಿತಾಧಿಕಾರಿಗಳ ಅವಧಿಯಲ್ಲಿ ಅನುಮೋದಿಸಲ್ಪಟ್ಟು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಕಾಮಗಾರಿ ಮಾಡಿಸಬಹುದೆಂದು ಸೂಚಿಸಿದ್ದರ ಮೇರೆಗೆ ಶ್ರೀ.ಕೆ.ಎಲ್.ನಾಗೇಂದ್ರರವರ ಸೂಚನೆಯಂತೆ ಉಳಿದ ಎಲ್ಲಾ ಸದಸ್ಯರುಗಳು ಟೆಂಡರುಗಳನ್ನು ಅನುಮೋದನೆ ಮಾಡಲು ಒಪ್ಪಬಹುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

ಮತ್ತು ಸಂಧಾನದ ಸಭೆಯಲ್ಲಿ ಅಂದಾಜು ದರಕ್ಕಿಂತ ಶೇಕಡ 11.5ರಷ್ಟು ಹೆಚ್ಚುವರಿ ನೀಡಲು ತೀರ್ಮಾನಿಸಿರುವುದರಿಂದ, ನಗರಸಭಾ ಕೌನ್ಸಿಲ್‌ಗೆ ಶೇಕಡ 8ರಷ್ಟು ಹೆಚ್ಚುವರಿ ನೀಡಲು ಅವಕಾಶವಿರುವುದರಿಂದ ಸಂಧಾನದ ದರವು ಶೇಕಡ 8ಕ್ಕಿಂತ ಹೆಚ್ಚಾಗಿರುವುದರಿಂದ, ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರಿಗೆ ಟೆಂಡರ್ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಯಿತು.

**ವಿಷಯ:3:–** ಅಧ್ಯಕ್ಷರು ಸಭೆ ವೇಳೆಯಲ್ಲಿ ತರಬಹುದಾದ ಇತರೆ ವಿಷಯಗಳು.

**ತೀರ್ಮಾನ:3:–** ಇತರೆ ವಿಷಯಗಳು ಯಾವುದು ಇರುವುದಿಲ್ಲ.

ಸಹಿ:
(ಕೆ.ಸಿ.ನಾಗಮ್ಮ),
ಅಧ್ಯಕ್ಷರು,
ನಗರಸಭೆ, ಮಂಡ್ಯ,

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.